ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1887 (2250)
2.	ಸದಸ್ಯರ ಹೆಸರು	:	ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3.	ಉತ್ತರಿಸಬೇಕಾದ ದಿನಾಂಕ	:	31-03-2020 (ಸದನವನ್ನು ಮುಂದೂಡಲಾಗಿದೆ)
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರದ ಒಳಚರಂಡಿ ಯೋಜನೆ ಕಾಮಗಾರಿಗಳು ಪೂರ್ಣಗೊಂಡಿವೆಯೇ; ಪ್ರತಿ ಮನೆಗಳಿಗೆ ಒಳಚರಂಡಿ ಯೋಜನೆಯ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಪ್ರತಿ ಮನೆಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಮೂಲಕ ತೆರೆದ ಚರಂಡಿಯ ಮೂಲಕ ಹರಿಯುತ್ತಿರುವ ಕಲುಷಿತ ನೀರಿನ ಹರಿವನ್ನು ತಪ್ಪಿಸಲಾಗುವುದೇ;	**ಕೆ.ಯು.ಐ.ಡಿ.ಎಫ್.ಸಿ ಉತ್ತರ:**ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ಚಾಮರಾಜನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ದಿನಾಂಕ:31/12/2018 ರಂದು ಪೂರ್ಣಗೊಂಡಿದೆ. ಮನೆ ಸಂಪರ್ಕ ಕಲ್ಪಿಸುವುದು ಈ ಯೋಜನೆ ವ್ಯಾಪ್ತಿಯಲ್ಲಿರುವುದಿಲ್ಲ. ಪ್ರತಿ ಮನೆ ಸಂಪರ್ಕವನ್ನು ಕಲ್ಪಿಸಲು ನಗರಸಭೆ ಚಾಮರಾಜನಗರ ರವರು ಕ್ರಮ ಕೈಗೊಂಡಿರುತ್ತಾರೆ. ಹಾಗೂ ಈ ಕೆಲಸ ಪ್ರಗತಿಯಲ್ಲಿದೆ. ಚಾಮರಾಜನಗರದ ಎಲ್ಲಾ ಬಳಕೆದಾರರು ಒಳಚರಂಡಿ ಸಂಪರ್ಕವನ್ನು ಪಡೆದ ನಂತರ ತೆರೆದ ಚರಂಡಿಯಲ್ಲಿ ಹರಿಯುತ್ತಿರುವ ಕಲುಷಿತ ನೀರು ತಪ್ಪಿಸಬಹುದಾಗಿದೆ. **ಡಿ.ಎಂ.ಎ ಉತ್ತರ:** ಚಾಮರಾಜನಗರದ ಒಳಚರಂಡಿ ಯೋಜನೆಯ ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡಿರುತ್ತವೆ. ಚಾಮರಾಜನಗರ ಪಟ್ಟಣದಲ್ಲಿ 16191 ಮನೆಗಳಿದ್ದು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯವರಿಂದ ಅರಿವು ಮೂಡಿಸಿ, ಇದುವರೆವಿಗೂ ಸುಮಾರು 6300 ಮನೆಗಳಿಗೆ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಉಳಿಕೆ ಮನೆಗಳ ಸಂಪರ್ಕಗಳು ಪ್ರಗತಿಯಲ್ಲಿರುತ್ತದೆ. ಒಂದು ಸಂಪರ್ಕಕ್ಕೆ ಸುಮಾರು ರೂ.5,000.00 ಗಳಿಂದ ರೂ.15000.00 ವರೆಗೆ ವೆಚ್ಚವಾಗುವುದು. ಸದರಿ ವೆಚ್ಚವನ್ನು ಸಂಬಂಧಿಸಿದ ಮನೆ ಮಾಲಿಕರೇ ಭರಿಸಬೇಕಾಗಿರುವುದರಿಂದ, ಪೂರ್ಣ ಪ್ರಮಾಣದಲ್ಲಿ ಮನೆಗಳಿಗೆ ಒಳಚರಂಡಿ ಸಂಪರ್ಕಗಳನ್ನು ಕಲ್ಪಿಸಲು ವಿಳಂಬವಾಗಿರುತ್ತದೆ. ಬಾಕಿ ಇರುವ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪೂರ್ಣಗೊಂಡಲ್ಲಿ ತೆರದ ಚರಂಡಿಯ ಮೂಲಕ ಹರಿಯುತ್ತಿರುವ ಕಲುಷಿತ ನೀರನ್ನು ಸಂಪೂರ್ಣವಾಗಿ ತಡೆಯಲಾಗುತ್ತದೆ.

ಕ್ರ. ಸಂ	ಪ್ರಶ್ನೆ	ಉತ್ತರ
ಆ)	ಚಾಮರಾಜನಗರ ಒಳಚರಂಡಿ ಕಾಮಗಾರಿಗಳಗೆ ಇನ್ನೂ 50 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ: ಈ ಪ್ರಸ್ತಾವನೆಗೆ ಅನುಮೋದನೆ ನೀಡುವ ಮೂಲಕ ಚಾಮರಾಜನಗರದ ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೇ?	ಚಾಮರಾಜನಗರ ಒಳಚರಂಡಿ ಕಾಮಗಾರಿಗಳಗೆ ಸಂಬಂಧಿಸಿದ ರೂ.50.00 ಕೋಟಿಗಳ ಯಾವುದೇ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಲ್ಲಿ ನಂತರ ನಿಯಮಾನುಸಾರ ಪರಿಶೀಲಿಸಿ. ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: ನಅಇ 258 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.